# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 282

**ಮಾನ್ಯ ಸದಸ್ಯರ ಹೆಸರು** : ಶ್ರೀ ಟಿ.ಡಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 06.03.2025

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2024-25ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನೀಡುತ್ತಿರುವ ಲಘು ವಾಹನಗಳ ಸಂಖ್ಯೆ ಎಷ್ಟು; | 2024-25ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಲಘು ವಾಹನಗಳನ್ನು ನೀಡುವ ಕಾರ್ಯಕ್ರಮವನ್ನು ಇಲಾಖೆಯಿಂದ ಹಮ್ಮಿಕೊಂಡಿರುವುದಿಲ್ಲ.<br><br>ಆದರೆ, ಪ್ರವಾಸೋದ್ಯಮ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ. ಯೋಜನೆ ಅಡಿ ಈ ಕೆಳಕಂಡ ಮೊಬೈಲ್ ಕ್ಯಾಂಟೀನ್ ಖರೀದಿಸಲು ಸಹಾಯಧನ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br><br>A) ಪ್ರವಾಸೋದ್ಯಮ ಹಾಗೂ ಆತಿಥ್ಯ ಕ್ಷೇತ್ರದಲ್ಲಿ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕಾರ್ಯಕ್ರಮ:<br>ಪರಿಶಿಷ್ಟ ಜಾತಿಗೆ ಸೇರಿದ 170 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 105 ಅಭ್ಯರ್ಥಿಗಳಿಗೆ ಒಟ್ಟಾರೆ 275 ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಹಾಗೂ ಆತಿಥ್ಯಕ್ಷೇತ್ರದಲ್ಲಿ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br><br>B) ಮೊಬೈಲ್ ಕ್ಯಾಂಟೀನ್ ಖರೀದಿಸಲು ಸಹಾಯ ಧನ ಕಾರ್ಯಕ್ರಮ:<br>ಮೇಲಿನ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದವರಿಗೆ ಪರಿಶಿಷ್ಟ ಜಾತಿಯ 170 ಹಾಗೂ ಪರಿಶಿಷ್ಟ ಪಂಗಡಕ್ಕೆ 105 ಸೇರಿದ ಒಟ್ಟು 275 ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಪ್ರವಾಸಿ ತಾಣಗಳಲ್ಲಿ ಮೊಬೈಲ್ ಕ್ಯಾಟೀನ್ ಖರೀದಿಸಲು ಪ್ರತಿ ಅಭ್ಯರ್ಥಿಗೆ ಘಟಕ ವೆಚ್ಚದಲ್ಲಿ ಶೇ.70%ರಷ್ಟು, ಗರಿಷ್ಠ ರೂ.5.00 ಲಕ್ಷಗಳ ಸಹಾಯಧನ ವಿತರಿಸಲಾಗುತ್ತಿದೆ |
| ಆ) | ವಾಹನಗಳನ್ನು ನೀಡುವಂತೆ ಕೋರಿ ಬಂದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಮೊಬೈಲ್ ಕ್ಯಾಂಟೀನ್ ಖರೀದಿಸಲು ಸಹಾಯಧನ ನೀಡಲು ಕೋರಿ ಜಿಲ್ಲಾವಾರು ಸ್ವೀಕೃತವಾಗಿರುವ ಅರ್ಜಿಗಳ ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |

<table>
<tr>
<td>ಇ)</td>
<td>ಈ ವಾಹನಗಳನ್ನು ಖರೀದಿಸಲು ಫಲಾನುಭವಿಗಳು ನೀಡಬೇಕಾದ ವಂತಿಕೆ ಎಷ್ಟು, ಲಘು ವಾಹನಗಳ ಖರೀದಿಗಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳಿಗೆ ವಾಹನಗಳು ವಿತರಿಸಲಾಗುತ್ತಿದೆಯೇ:</td>
<td rowspan="2">ಯೋಜನೆಯ ಘಟಕ ವೆಚ್ಚ ವಿವರಗಳು ಈ ಕೆಳಗಿನಂತಿದೆ.<br>ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಸಲು ಇಲಾಖೆಯ ಸಹಾಯಧನ- ಘಟಕ ವೆಚ್ಚದಲ್ಲಿ ಶೇ.70% ರಷ್ಟು, ಗರಿಷ್ಠ ರೂ.5.00 ಲಕ್ಷಗಳು ಮಾತ್ರ ಉಳಿದ ವೆಚ್ಚವನ್ನು ಫಲಾನುಭವಿಯು ಭರಿಸಬೇಕಾಗಿರುತ್ತದೆ.<br>ಪ್ರಸ್ತುತ ಸದರಿ ಕಾರ್ಯಕ್ರಮಕ್ಕೆ ಅನುಬಂಧದಲ್ಲಿ ತಿಳಿಸಿರುವಂತೆ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸಿ, ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.</td>
</tr>
<tr>
<td>ಈ)</td>
<td>ಎಲ್ಲಾ ಅಭ್ಯರ್ಥಿಗಳಿಗೆ ವಾಹನಗಳ ಸೌಲಭ್ಯ ದೊರೆಯದೆ ಇದ್ದಲ್ಲಿ ದೊರಕುವಂತೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td>
</tr>
</table>

**TOR 34 TDV 2025**

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

## ವಿಧಾನ ಪರಿಷತ್ತಿನ ಪ್ರಶ್ನೆ.ಸಂಖ್ಯೆ: 263 (282)ಕ್ಕೆ ಅನುಬಂಧ

**2024-25 ನೇ ಸಾಲಿನಲ್ಲಿ ಯೋಜನೆಯಡಿ ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಉದ್ದಿಮೆದಾರರನ್ನು ಉತ್ತೇಜಿಸಲು ಕೌಶಲ್ಯಾಭಿವೃದ್ಧಿ Entrepreneurship Programme (EP) ತರಬೇತಿ ಹಾಗೂ ಪ್ರವಾಸಿ ತಾಣಗಳಲ್ಲಿ ಮೊಬೈಲ್ ಕ್ಯಾಂಟೀನ್ ಖರೀದಿಸಲು ಸಹಾಯಧನ ವಿತರಿಸಲು ಜಿಲ್ಲಾವಾರು ಅಭ್ಯರ್ಥಿಗಳ ಗುರಿ ಹಾಗೂ ಸ್ವೀಕೃತವಾಗಿರುವ ಅರ್ಜಿಗಳ ವಿವರ**

| ಕ್ರ ಸಂ | ಜಿಲ್ಲೆಯ ಹೆಸರು | ಪರಿಶಿಷ್ಟ ಜಾತಿಯ ನಿಗದಿಪಡಿಸಿರುವ ಜಿಲ್ಲಾವಾರು ಗುರಿ | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಪರಿಶಿಷ್ಟಪಂಗಡಕ್ಕೆ ನಿಗಧಿಪಡಿಸಿರುವ ಜಿಲ್ಲಾವಾರು ಗುರಿ | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು (ನ) | 8 | 9 | 3 | 4 |
| 2 | ಬೆಂಗಳೂರು (ಗ್ರಾ) | 2 | 18 | 1 | 5 |
| 3 | ರಾಮನಗರ | 4 | 13 | 2 | 3 |
| 4 | ಚಿತ್ರದುರ್ಗ | 6 | 39 | 5 | 15 |
| 5 | ದಾವಣಗೆರೆ | 4 | 16 | 3 | 3 |
| 6 | ಕೋಲಾರ | 5 | 21 | 2 | 5 |
| 7 | ಚಿಕ್ಕಬಳ್ಳಾಪುರ | 7 | 22 | 5 | 7 |
| 8 | ಶಿವಮೊಗ್ಗ | 6 | 11 | 3 | 7 |
| 9 | ತುಮಕೂರು | 8 | 28 | 5 | 7 |
| 10 | ಚಿಕ್ಕಮಗಳೂರು | 4 | 35 | 2 | 3 |
| 11 | ದಕ್ಷಿಣ ಕನ್ನಡ | 3 | 3 | 2 | 3 |
| 12 | ಉಡುಪಿ | 4 | 4 | 3 | 6 |
| 13 | ಹಾಸನ | 7 | 36 | 3 | 6 |
| 14 | ಕೊಡಗು | 2 | 7 | 1 | 3 |
| 15 | ಮಂಡ್ಯ | 7 | 17 | 4 | 6 |
| 16 | ಮೈಸೂರು | 8 | 12 | 6 | 6 |
| 17 | ಚಾಮರಾಜನಗರ | 5 | 11 | 3 | 4 |
| 18 | ಬೆಳಗಾವಿ | 14 | **39** | 9 | 8 |
| 19 | ವಿಜಯಪುರ | 7 | 20 | 3 | 11 |
| 20 | ಬಾಗಲಕೋಟೆ | 4 | 15 | 2 | 8 |
| 21 | ಧಾರವಾಡ | 4 | 12 | 2 | 4 |
| 22 | ಗದಗ | 3 | 11 | 2 | 3 |
| 23 | ಹಾವೇರಿ | 5 | 8 | 4 | 1 |
| 24 | ಉತ್ತರ ಕನ್ನಡ | 5 | 6 | 3 | 0 |
| 25 | ಬಳ್ಳಾರಿ | 4 | 23 | 4 | 19 |
| 26 | ಬೀದರ್ | 6 | 29 | 4 | 13 |
| 27 | ಕಲಬುರಗಿ | 9 | 50 | 4 | 8 |
| 28 | ಯಾದಗಿರಿ | 4 | 23 | 3 | 9 |
| 29 | ರಾಯಚೂರು | 5 | 21 | 5 | 28 |
| 30 | ಕೊಪ್ಪಳ | 4 | 11 | 3 | 7 |
| 31 | ವಿಜಯನಗರ | 6 | 14 | 4 | 6 |
| | ಒಟ್ಟು | **170** | **584** | **105** | **218** |